## ಸಹಿ ಕಾಪಿ ಅಪ್ಲಿಕೇಶನ್




ಓಎಸ್‌ಎಕ್ಸ್‌ನಲ್ಲಿ ಆ್ಯಪಲ್ ಪ್ರಿವ್ಯೂನಲ್ಲಿರುವ ಸಹಿ ಕಾಪಿ ಮಾಡಿಟ್ಟುಕೊಂಡು ಬೇರೆ ಕಡೆ ಬಳಸುವ ಅಪ್ಲಿಕೇಶನ್ ಈಗ ಲಭ್ಯ. ಈ ಅಪ್ಲಿಕೇಶನ್‌ನಿಂದ ಕೈಯಲ್ಲಿ ಹಾಕಿದ ಸಹಿಯನ್ನು ಕಾಪಿ ಮಾಡಿ ಪಿಡಿಎಫ್ ದಾಖಲೆಗಳಲ್ಲಿರುವ ಪತ್ರಗಳು, ಅರ್ಜಿಗಳಲ್ಲಿ ಬಳಸಬಹುದು. ಖಾಲಿ ಕಾಗದದ ಮೇಲೆ ಸಹಿ ಹಾಕಿ. ಅದನ್ನು ವೆಬ್ ಕ್ಯಾಮೆರಾದಲ್ಲಿ ಸೆರೆ ಹಿಡಿದು ಪ್ರಿವ್ಯೂನಲ್ಲಿ ತೆರೆದ ಪಿಡಿಎಫ್‌ಗೆ ಆ್ಯಪೆಂಡ್ ಮಾಡಿದರಾಯ್ತು.

ಆದರೆ ಈ ಹಿಂದೆ ಇದನ್ನು ಪ್ರಿವ್ಯೂನಲ್ಲೇ ಬಳಸಬೇಕಿತ್ತು. ಈಗ ಪ್ರಿವ್ಯೂನಲ್ಲಿರುವ ಈ ಸಹಿಯನ್ನು ಇಮೇಜ್ ಫೈಲ್‌ನಲ್ಲಿ ರಕ್ಷಿಸಿಟ್ಟುಕೊಳ್ಳಿ. ನಂತರ ಪೇಜಿಸ್, ವರ್ಡ್ ಅಥವಾ ಟೆಕ್ಸ್ಟ್ಎಡಿಟ್‌ನಲ್ಲಿ ಖಾಲಿ ಡಾಕ್ಯುಮೆಂಟ್ ತೆರೆಯಿರಿ. ಇದನ್ನು ಪ್ರಿಂಟ್ ಮಾಡಿ. ನಂತರ 'ಪಿಡಿಎಫ್ ಇನ್ ಪ್ರಿವ್ಯೂ' ತೆರೆಯಿರಿ. ನಂತರ ಹೊಸ ಇಮೇಜ್ ಫೈಲ್ ತೆರೆಯಲು ಕಮಾಂಡ್ ಎನ್ ಬಳಸಿ. ಇನ್‌ಸ್ಟಂಟ್ ಅಲ್ಫಾ ಆಯ್ಕೆ ಮಾಡಿ. ಸಹಿಯ ಸುತ್ತ ಇರುವ ಬಿಳಿ ಜಾಗವನ್ನು ಕ್ಲಿಕ್ ಮಾಡಿ. ನಂತರ ಕರ್ಸರ್‌ನಿಂದ ಡ್ರ್ಯಾಗ್ ಮಾಡಿ, ಡಿಲೀಟ್ ಮಾಡಿ. ಈಗ ನಿಮ್ಮ ಸಹಿ ಪಾರದರ್ಶಕ ಹಿನ್ನೆಲೆಯ ಮೇಲೆ ಚೆಕ್ಕರ್‌ಬೋರ್ಡ್ ವಿನ್ಯಾಸದಲ್ಲಿ ಕಾಣುತ್ತದೆ. ಈ ಇಮೇಜ್ ಅನ್ನು ಜೆಪೆಗ್, ಪಿಎನ್‌ಜಿ ಅಥವಾ ಟಿಫ್‌ನಲ್ಲಿ ರಕ್ಷಿಸಿಟ್ಟುಕೊಳ್ಳಿ. ನಂತರ ಯಾವುದೇ ಪ್ರೋಗ್ರಾಮ್‌ನಲ್ಲಿ ಇದನ್ನು ಇಂಪೋರ್ಟ್ ಮಾಡಬಹುದು.

## ಮೊಬೈಲ್‌ನಿಂದ ಟೀವಿಗೆ ವಿಡಿಯೋ ವರ್ಗಾವಣೆ



ಗೂಗ್ಲ್‌ನ ಯೂಟ್ಯೂಬ್ ಅಪ್ಲಿಕೇಶನ್‌ನಲ್ಲಿ ಈಗ 'ಸೆಂಡ್ ಟು ಟೀವಿ' ಸೌಲಭ್ಯ ಸೇರಿಸಲಾಗಿದೆ. ಇದರಿಂದ ಐಒಎಸ್ ಮೊಬೈಲ್ ಸೆಟ್ ಇರುವವರು ವಿಡಿಯೋಗಳನ್ನು ಕೆಲವು ಟೀವಿ ಸೆಟ್, ಸೆಟ್-ಟಾಪ್ ಬಾಕ್ಸ್‌ಗಳಿಗೆ ಕಳಿಸಬಹುದು. ಈ ವಿಡಿಯೋಗಳನ್ನು ಮೊಬೈಲ್‌ನಲ್ಲಿ ರಿಮೋಟ್‌ನಂತೆ ನಿಯಂತ್ರಿಸುತ್ತ, ಟೀವಿಯಲ್ಲಿ ವೀಕ್ಷಿಸಬಹುದು. ಯೂಟ್ಯೂಬ್‌ನಲ್ಲಿರುವ ಹೆಚ್ಚಿನ ವಿಡಿಯೋಗಳನ್ನು ಮೊಬೈಲ್‌ನಿಂದ ಅಪ್‌ಲೋಡ್ ಮಾಡಲಾಗಿದೆ. ಈ ಹೊಸ ಅಪ್ಲಿಕೇಶನ್ ವೈ-ಫಿ ಸಂಪರ್ಕ ನಿಧಾನವಾಗಿದ್ದಾಗಲೂ ಕೆಲಸ ಮಾಡುತ್ತದೆ.

## ಫೇಸ್‌ಬುಕ್‌ನಿಂದ ಉಚಿತ ಮೆಸೇಜ್

ಉಚಿತ ಮೆಸೇಜ್ ಕಳಿಸುವ ಕೊಡುಗೆ ಯಾರಿಗೆ ಬೇಡ ಹೇಳಿ? ಈಗ ಸಾಮಾಜಿಕ ಜಾಲತಾಣ ಫೇಸ್‌ಬುಕ್ ಭಾರತದ ಮೊಬೈಲ್ ಬಳಕೆದಾರರಿಗೆ ಈ ಸೌಲಭ್ಯವನ್ನು ಉಚಿತವಾಗಿ ಅಥವಾ ಹೆಚ್ಚಿನ ರಿಯಾಯ್ತಿಯಲ್ಲಿ ಒದಗಿಸಲು ಏರ್‌ಟೆಲ್ ಮತ್ತು ಆರ್‌ಕಾಮ್ ಟೆಲಿಕಾಂ ಜೊತೆ ಒಪ್ಪಂದ ಮಾಡಿಕೊಂಡಿದೆ. ಆಂಡ್ರಾಯ್ಡ್ ಮತ್ತು ಐಒಎಸ್ ನಲ್ಲಿ ಫೇಸ್‌ಬುಕ್ ಮೆಸೆಂಜರ್ ಬಳಕೆದಾರರಿಗೆ ಇದು ಅನ್ವಯ.




## ಆ್ಯಪಲ್ ಪೇಜಿಸ್

ಆ್ಯಪಲ್‌ನ ಪೇಜಿಸ್ ವರ್ಡ್ ಪ್ರೊಸೆಸರ್ ಹಲವು ವಿಧಗಳಲ್ಲಿ ಮೈಕ್ರೋಸಾಫ್ಟ್ ವರ್ಡ್‌ಗೆ ಪರ್ಯಾಯವೆನಿಸಿದೆ. ಓಎಸ್‌ಎಕ್ಸ್‌ನಲ್ಲಿ ಡಾಕ್ಯುಮೆಂಟ್ ಸೃಷ್ಟಿಸುವುದು ಇದರಲ್ಲಿ ಬಹಳ ಸುಲಭ. ಆದರೆ ಪಿಡಿಎಫ್ ರೂಪದಲ್ಲಿ ಕಳಿಸಿದರೆ ಎಡಿಟ್ ಮಾಡಲು ಸಾಧ್ಯವಿಲ್ಲ. ಹೀಗಾಗಿ ಪೇಜಿಸ್‌ನಲ್ಲಿರುವ ಎಕ್ಸ್‌ಪೋರ್ಟ್ ಆಯ್ಕೆಯನ್ನು ಬಳಸಿಕೊಂಡು ಡಾಕ್ಯುಮೆಂಟ್ ಸೇವ್ ಮಾಡಿ. ಫೈಲ್‌ಗೆ ಹೋಗಿ. ಎಕ್ಸ್‌ಪೋರ್ಟ್ ಪಟ್ಟಿಯನ್ನು ಆಯ್ಕೆ ಮಾಡಿ. ಅದರಲ್ಲಿ ವರ್ಡ್ ಆಯ್ಕೆಯಿದ್ದು ಆರ್‌ಟಿಫ್ ಮತ್ತು ಟಿಎಕ್ಸ್ಟಿ ರೂಪದಲ್ಲಿ ಸೇವ್ ಮಾಡಬಹುದು. ಪದೇ ಪದೇ ವರ್ಡ್ ಫೈಲ್ ಅನ್ನು ಎಕ್ಸ್‌ಪೋರ್ಟ್ ಮಾಡುವುದಾದರೆ ಹಾಟ್‌ಕೀ ಷಾರ್ಟ್‌ಕಟ್ ಮಾಡಿಕೊಳ್ಳಬಹುದು. ಇದಕ್ಕಾಗಿ ಕೀಬೋರ್ಡ್ ಷಾರ್ಟ್‌ಕಟ್‌ಗೆ ಹೋಗಿ, ಅಪ್ಲಿಕೇಶನ್ ಷಾರ್ಟ್‌ಕಟ್ ಆಯ್ಕೆ ಮಾಡಿದ ನಂತರ + ಸಂಕೇತದ ಮೇಲೆ ಕ್ಲಿಕ್ ಮಾಡಿ. ಡ್ರಾಪ್- ಡೌನ್- ಮೆನುವಿನಿಂದ ಪೇಜಿಸ್ ಆಯ್ಕೆ ಮಾಡಿಕೊಂಡು 'ವರ್ಡ್' ಟೈಪ್ ಮಾಡಿ. ನಂತರ ನಿಮ್ಮ ಆಯ್ಕೆಯ ಹಾಟ್-ಕೀಗಳನ್ನು ಹೊಂದಿಸಿ.



■ ಎಸ್. ತುಂಬೆ